20.	ಜವಾಹರ್ ರೋಜಗಾರ ಯೋಜನೆ (ಎರಡನೇ ವಾಹನಿ)	70.00	67.858

ಸರ್ಕಾರಿ ಆಸ್ಪತ್ರೆಯಲ್ಲಿ ಗೈರುಹಾಜರಾಗಿರುವವರ ಕುರಿತು

907 - ಶ್ರೀ ಎನ್. ರಾಜಣ್ಣ (ಭಾರತಿ ನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಯಲ್ಲಿ ಗೈರು ಹಾಜರಾಗಿರುವ ವೈದ್ಯರುಗಳ ತಜ್ಞರುಗಳ ಸಂಖ್ಯೆ ಮತ್ತು ಹೊರ ದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?

ಆ) ಇವರುಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ತೆಗೆದುಕೊಂಡ ಕ್ರಮವೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 61 ಮಂದಿ ವೈದ್ಯಾಧಿಕಾರಿಗಳು. ದೀರ್ಘಕಾಲದಿಂದ ಅನಧಿಕೃತ ಗೈರುಹಾಜರಿಯಾಗಿರುತ್ತಾರೆ. ಇವರುಗಳು ಹೊರ ದೇಶಗಳಲ್ಲಿ ಇರುವ ಬಗ್ಗೆ ವಿವರವಿಲ್ಲ.

ಆ) ಇವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಮಲಾಪುರ ಮತ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಇರುವ ಸೌಲಭ್ಯ

911 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಕಮಲಾಪುರ ಮತ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಇರುವ ಸೌಲಭ್ಯಗಳೇನು; ಸಾಕಷ್ಟು ಶಿಕ್ಷಕರ ನೇಮಕಾತಿ ಆಗಿದೆಯೇ?

ಆ) ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು ಹಾಗಿದ್ದಲ್ಲಿ ಸದರಿ ಹುದ್ದೆಗಳಿಗೆ ನೇಮಕ ಯಾವಾಗ ಮಾಡಲಾಗುವುದು?

ಇ) ಇದುವರೆಗೂ ಶಿಕ್ಷಕರ ಕೊರತೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಸ್ವಂತ ಕಟ್ಟಡ ಸೌಲಭ್ಯ ಇದೆಯೇ, ಕಟ್ಟಡ ಕೊರತೆ ಇರುವ ಶಾಲೆಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕಮಲಾಪುರ ಮತ ಕ್ಷೇತ್ರದಲ್ಲಿ 138 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು 517 ಶಿಕ್ಷಕರ ನೇಮಕ ಮಾಡಲಾಗಿದ್ದು, 137 ಶಾಲಾ ಕಟ್ಟಡ ಒದಗಿಸಲಾಗಿದೆ. 30,750 ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿರುವರು. 517 ಶಿಕ್ಷಕರ ನೇಮಕ ಮಾಡಿದ್ದು ಪ್ರಾಥಮಿಕ ಶಾಲೆಯಲ್ಲಿ ಕೇವಲ 18 ಶಿಕ್ಷಕರ ಹುದ್ದೆ ಮಾತ್ರ ಖಾಲಿ ಇರುತ್ತದೆ. 1994ನೇ ಸಾಲಿನಲ್ಲಿ 15 ಪ್ರೌಢ ಶಾಲಾ ಶಿಕ್ಷಕರನ್ನು ನೇಮಕ ಮಾಡಲಾಗಿದೆ.

ಅ) ಪ್ರಾಥಮಿಕ ಶಾಲೆಗಳಲ್ಲಿ 18

ಪ್ರೌಢ ಶಾಲೆಗಳಲ್ಲಿ 15

ಈ ಹುದ್ದೆಗಳನ್ನು 1995-96ನೇ ಸಾಲಿನಲ್ಲಿ ನೇಮಕಾತಿಯಲ್ಲಿ ತುಂಬಲಾಗುವುದು

ಇ) ಹೌದು. ಪ್ರೌಢ ಶಾಲೆಯಲ್ಲಿ ಒಟ್ಟು 21 ಹುದ್ದೆಗಳಲ್ಲಿ 17 ಕಲಾ ಶಿಕ್ಷಕರ ಹುದ್ದೆಗಳಿಂದ ಕೆ.ಎ.ಟಿ. ತಡೆಯಾಜ್ಞೆ ಇರುವುದರಿಂದ ನೇಮಕ ಮಾಡಿರುವುದಿಲ್ಲ.

ಈ) ಕಮಲಾಪುರ ಮತ ಕ್ಷೇತ್ರದಲ್ಲಿರುವ 138 ಪ್ರಾಥಮಿಕ ಶಾಲೆಗಳ ಪೈಕಿ 137 ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡ ಸೌಲಭ್ಯವಿದೆ. 1 ಶಾಲೆಗೆ ಮಾತ್ರ ಸ್ವಂತ ಕಟ್ಟಡ ಇರುವುದಿಲ್ಲ. 13 ಪ್ರೌಢ ಶಾಲೆ ಪೈಕಿ 10 ಶಾಲೆಗಳಿಗೆ ಸ್ವಂತ ಕಟ್ಟಡಗಳಿದ್ದು 6 ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲ.

ಕೆ.ಆರ್. ಆಸ್ಪತ್ರೆಯ ಹೊಸ ಕಟ್ಟಡದ ಉಪಯೋಗ

912 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಕೆ.ಆರ್. ಆಸ್ಪತ್ರೆಯ ಹೊಸ ಕಟ್ಟಡದ ಉಪಯೋಗ ಎಂದಿನಿಂದ ಜನಸಾಮಾನ್ಯರಿಗೆ ದೊರೆಯುತ್ತದೆ.

ಆ) ಹಿಂದೆ ಉದ್ಘಾಟನೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತೆ, ಹಾಗಿದ್ದಲ್ಲಿ ಸುಸಜ್ಜಿತವಾದ ವ್ಯವಸ್ಥೆ ಮಾಡಲಾಗಿತ್ತೆ ಬೇಕಾದ ನೌಕರ ವರ್ಗದ ನೇಮಕವಾಗಿದೆಯೇ?

ಇ) ಆಸ್ಪತ್ರೆಗೆ ಅವಶ್ಯಕವಾದ ಎಲ್ಲಾ ವ್ಯವಸ್ಥೆಗೆ ಮಾಡಲಾಗಿದೆಯೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಆಸ್ಪತ್ರೆಗೆ ಬೇಕಾದ ನೈರ್ಮಲ್ಯಗಾರರು, ಕಾವಲುಗಾರರು, ಶುಶ್ರೂಷಕರು ಜನಕೇಟರ್ ಮತ್ತು ಇತರೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಂಡ ಮೇಲೆ ಜನಸಾಮಾನ್ಯರ ಉಪಯೋಗಕ್ಕಾಗಿ ಹೊಸ ಕಟ್ಟಡವನ್ನು ಉಪಯೋಗಿಸಿ ಕೊಳ್ಳಲಾಗುವುದು.

ಆ) ಯಾವುದೇ ಉದ್ಘಾಟನೆ ಸಮಾರಂಭವನ್ನು ಸರ್ಕಾರದ ವತಿಯಿಂದ ಹಮ್ಮಿಕ್ಕೊಂಡಿರಲಿಲ್ಲ. ನೌಕರರ ವರ್ಗದ ನೇಮಕಾತಿ ಬಗ್ಗೆ ಈಗತಾನೆ ಮೀಸಲಾತಿ ರೋಸ್ಟರ್ ಬಂದಿದ್ದು ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಕೆಲವು ಉಪಕರಣಗಳನ್ನು ಹಾಗೂ ಬೇಕಾದ ಪೀಠೋಪಕರಣಗಳನ್ನು ಈಗಾಗಲೇ ಖರೀದಿಸಲಾಗಿದೆ. ಉಳಿದಂತೆ ಹಂತ ಹಂತಗಳಲ್ಲಿ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.